ದಿಃ 17-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆ** : ಪ್ರತಿವಾದಿಗಳ ಪರ ಶ್ರೀ ಎಮ್ ಎನ್ ಜೆ ವಕೀಲರಿಂದ.

ಈ ದಾವೆಯಲ್ಲಿ ನಾನು 3 ನೇ ಪ್ರತಿವಾದಿಯಾಗಿದ್ದು, ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದ್ರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ಸಿ ಟಿ ಎಸ್ ನಂಬರ 2538 ಅ ರ ಪ್ರಾಪರಟಿ ಕಾರ್ಡಿನ ನಕಲು ಹಾಗೂ ಸದರಿ ಸ್ವತ್ತಿನ ನಕಾಶೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ಒಟ್ಟಾರೆಯಾಗಿ ನಿಡಿ 1 ಎಂದು, ಸಿ ಟಿ ಎಸ್ ನಂಬರ 3091 ಅ2/6 ರ ಪ್ರಾಪರಟಿ ಕಾರ್ಡಿನ ನಕಲು ಹಾಗೂ ಸದರಿ ಸ್ವತ್ತಿನ ನಕಾಶೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ಒಟ್ಟಾರೆಯಾಗಿ ನಿಡಿ 2 ಎಂದು, ಶ್ರೀ ಜೀಜಾಮಾತಾ ಕ್ಷತ್ರೀಯಾ ಮರಾಠಾ ಮಹಿಳಾ ಸಂಘ ರವರು ನೀಡಿದ ಎರಡು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪುರಾವೆಗೊಳಪಟ್ಟು ನಿಡಿ 3 ಮತ್ತು 4 ಎಂದು, 4 ಭಾವಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪುರಾವೆಗೊಳಪಟ್ಟು ಕ್ರಮವಾಗಿ ನಿಡಿ 5 ರಿಂದ 8 ಎಂದು, ಭಾವಚಿತ್ರಗಳಿಗೆ ಸಂಬಂಧಿಸಿದ ಒಂದು ಸಿಡಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 9 ಎಂದು, ದಿನಾಂಕ 24-11-2023 ರಂದು ಚಬ್ಬಲಗೇರಿ ಗ್ರಾಮ ಪಂಚಾಯತ ರವರು ನೀಡಿದ ಮೂರು ದೃಢೀಕರಣ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ 10 ರಿಂದ 12 ಎಂದು, ಸರ್ವೇ ನಂಬರ 23/1 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 13 ಎಂದು, ಸರ್ವೇ ನಂಬರ 23/9 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 14 ಎಂದು, ಸರ್ವೇ ನಂಬರ 23/11 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 15 ಎಂದು, ಸರ್ವೇ ನಂಬರ 74/1 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 16 ಎಂದು, ಸರ್ವೇ ನಂಬರ 76/1 ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 17 ಎಂದು, ಸರ್ವೇ ನಂಬರ 157/1 ಪಹಣಿ

ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ 18 ಎಂದು ಗುರುತಿಸಲಾಯಿತು. ಆದ್ದರಿಂದ ವಾದಿಯ ದಾವೆ ವಜಾ ಮಾಡಲು ಕೋರುತ್ತೇನೆ.

**ಪಾಟೀ ಸವಾಲುಃ** ವಾದಿ ಪರ ಶ್ರೀ ಪಿ ಬಿ ಎ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮೂಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ.)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ., ಹಳಿಯಾಳ.